# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.09.2011**

## *ಮೃತರ ಕುಟುಂಬಕ್ಕೆ ಪಾಲಿಕೆಯಿಂದ ಪರಿಹಾರ*

ನಿನ್ನೆ ಮಧ್ಯಾಹ್ನ ಕಾಮಾಕ್ಷಿಪಾಳ್ಯದ ಮುಖ್ಯರಸ್ತೆಯಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕನ್‌ವೆನ್ಷನ್ ಹಾಲ್‌ನ ಅಡುಗೆ ಮನೆಯ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಈ ಘಟನೆಯಲ್ಲಿ ಕವಿತಾ ಎಂಬ ವಿದ್ಯಾರ್ಥಿನಿ ಮತ್ತು ಜಸ್ವಂತ್ ಎಂಬ ವ್ಯಕ್ತಿ ಮೃತಪಟ್ಟಿದ್ದು ಮತ್ತು 15 ಜನರು ಗಾಯಗೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಇಂದು ಮೃತರ ಕುಟುಂಬಕ್ಕೆ ತಲಾ ಒಂದು ಲಕ್ಷ ರೂ.ಗಳ ಮತ್ತು ಗಾಯಾಳುಗಳಿಗೆ ಹತ್ತು ಸಾವಿರ ರೂ.ಗಳ ಪರಿಹಾರಧನ ನೀಡಲಾಗುವುದೆಂದು ತಿಳಿಸಿದ್ದಾರೆ. ಹಾಗೂ ಕಲ್ಯಾಣ ಮಂಟಪದ ಮಾಲೀಕರ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದಾರೆ.

ನಿನ್ನೆ ನಡೆದ ಘಟನೆ ಸಂದರ್ಭದಲ್ಲಿ ಪಾಲಿಕೆಯ ರಾಜರಾಜೇಶ್ವರಿನಗರ ವಲಯದ ನಿಯಂತ್ರಣ ಕೊಠಡಿಯ ಸಿಬ್ಬಂದಿ, ಜೆಸಿಬಿ ಯಂತ್ರ ಮತ್ತು ಟಿಪ್ಪರ್‌ಗಳನ್ನು ಬಳಸಿ ಪರಿಹಾರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಎಂದು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು–560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.09.2011**

## ***ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರ ಮನೆ ಎದುರುಗಡೆ ತಮಟೆ ಬಾರಿಸುವ ಕಾರ್ಯಕ್ರಮ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಆಸ್ತಿ ತೆರಿಗೆ ಬಾಕಿ ಇರುವ ತೆರಿಗೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ವಸೂಲಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿದ್ದಲ್ಲಿ ಜಪ್ತಿ ವಾರಂಟ್‌ಗಳನ್ನು ಜಾರಿ ಮಾಡಿ ತೆರಿಗೆ ವಸೂಲಿ ಮಾಡಲು ವಲಯ ಜಂಟಿ ಆಯುಕ್ತರುಗಳಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಇಂದು ಸಹ ಕಂದಾಯ ಅಧಿಕಾರಿ (ಜೀವನಭೀಮಾನಗರ) ವ್ಯಾಪ್ತಿಯಲ್ಲಿ ಬರುವ ಹೆಚ್.ಎ.ಎಲ್. 2ನೇ ಹಂತದ 100 ಅಡಿ ರಸ್ತೆಯ ಆಸ್ತಿ ಸಂಖ್ಯೆ: 1134ರ ಮಾಲೀಕರಾದ ಶ್ರೀ ರಾಮಚಿತ್ತರಂಜನ್ ದಾಸ್ ಎಂಬುವರು 4 ಅಂತಸ್ತಿನ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿ ಅದನ್ನು ಮಲ್ಟಿನ್ಯಾಷನಲ್ ಕಂಪನಿಗಳಿಗೆ ಬಾಡಿಗೆಗೆ ನೀಡಿರುತ್ತಾರೆ. ಆದರೆ 2007–08 ರಿಂದ ಇದುವರೆಗೆ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸದೇ 71,90,000/– ರೂ.ಗಳು ಬಾಕಿ ಉಳಿಸಿಕೊಂಡಿರುತ್ತಾರೆ. ಆಸ್ತಿ ತೆರಿಗೆ ಪಾವತಿಸಲು ಸಹ ಕಂದಾಯ ಅಧಿಕಾರಿ ಹಲವಾರು ಬಾರಿ ನೋಟಿಸ್ ಕೂಡಾ ಜಾರಿ ಮಾಡಿದ್ದರು. ಆದಾಗ್ಯೂ ತೆರಿಗೆ ಪಾವತಿಸದೇ ಇರುವುದರಿಂದ ಇಂದು ಕಟ್ಟಡದ ಎದುರುಗಡೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆಗ ಆಸ್ತಿ ಮಾಲೀಕರಾದ ಶ್ರೀ ರಾಮ ಚಿತ್ತರಂಜನ್ ದಾಸ್ ರವರು ಜಂಟಿ ಆಯುಕ್ತರು (ಪೂರ್ವ) ರವರಿಗೆ ಪತ್ರ ನೀಡಿ, ದಿನಾಂಕ: 24.09.2011 ರಂದು ಶನಿವಾರ ತೆರಿಗೆ ಹಣ ಪಾವತಿಸುವುದಾಗಿ ಒಪ್ಪಿಕೊಂಡಿರುತ್ತಾರೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಜಪ್ತಿ ವಾರಂಟ್ ಜಾರಿ ಮಾಡುವುದರ ಜೊತೆಗೆ ಅವರ ಮನೆ ಎದುರು ತಮಟೆ ಹೊಡೆಯುವ ಕಾರ್ಯ ಮುಂದುವರೆಸಲಾಗುವುದೆಂದು ಆಯುಕ್ತರು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**